# ಪ್ರೇರಣಾ ಕಾಗದ

ನಾಲ್ಕು
ಗೆಳೆಯ/ತಿಯರ
ಗುಂಪಿನಲ್ಲಿ ಈ ಚಟುವಟಿಕೆ ಮಾಡಿರಿ.

೬

ನಮ್ಮ ಸುತ್ತಮುತ್ತ ಅನೇಕ ಐತಿಹಾಸಿಕ ಸ್ಮಾರಕಗಳು, ದೇವಸ್ಥಾನಗಳು, ಕೋಟೆ–ಕೊತ್ತಲಗಳು, ಕಟ್ಟಡಗಳು, ಮಾಸ್ತಿಕಲ್ಲು, ವೀರಗಲ್ಲು, ನಿಷದಿಕಲ್ಲು ಮುಂತಾದ ಸ್ಮಾರಕ ಕಲ್ಲುಗಳು ನಮ್ಮ ನಡುವೆ ಇದ್ದೂ ಇಲ್ಲದ ಹಾಗೆ ರಕ್ಷಣೆಯಿಲ್ಲದೆ ಕಣ್ಮರೆಯಾಗುತ್ತಿವೆ. ಇಂತಹ ಸ್ಮಾರಕಗಳನ್ನು ಕಣ್ಮರೆಯಾಗಲು ನಾವು ಯಾಕೆ ಬಿಡಬೇಕು? ಅವುಗಳನ್ನು ರಕ್ಷಣೆ ಮಾಡುವುದು ನಮ್ಮ ಜವಾಬ್ದಾರಿಯಲ್ಲವೆ? ನಾವು ಹಾಳು ಮಾಡುವುದು ಬೇಡ ಮತ್ತು ಬೇರೆಯವರು ಹಾಳು ಮಾಡದಂತೆ ಎಚ್ಚರವಹಿಸೋಣ. ಬನ್ನಿ ನಮ್ಮ ನಮ್ಮ ಊರಲ್ಲಿರುವ ಐತಿಹಾಸಿಕ ಸ್ಮಾರಕಗಳನ್ನು ಶಿಕ್ಷಕರ/ಹಿರಿಯರೊಂದಿಗೆ ಸೇರಿ ಹುಡುಕೋಣ... ನಮ್ಮ ಊರಿನ ಇತಿಹಾಸ ತಿಳಿಯೋಣ!!

ಮೊದಲಿಗೆ ನಿಮ್ಮ ಊರಲ್ಲಿ ಇರಬಹುದಾದ ದೇವಸ್ಥಾನ, ಚರ್ಚ್, ಮಸೀದಿ, ಶಾಸನಗಳು, ವೀರಗಲ್ಲುಗಳು, ಮಾಸ್ತಿಕಲ್ಲುಗಳು, ಬಾವಿ, ಕೆರೆ, ನದಿ, ಕೋಟೆ, ಪುಷ್ಕರಣಿ ಹಾಗೂ ನಿಮ್ಮ ಊರಿನಲ್ಲಿರುವ ಪಾರಂಪಾರಿಕ ಮನೆಗಳನ್ನು ಶಿಕ್ಷಕರ/ಹಿರಿಯರ ಸಹಾಯದಿಂದ ನೋಡಿರಿ. ನಂತರ ಸಾಧ್ಯವಾದರೆ ಅವುಗಳ ಪೋಟೊ ತೆಗೆದು ಪಕ್ಕದಲ್ಲಿ ಅಂಟಿಸಿರಿ, ಅಥವಾ ಅವುಗಳ ರೇಖಾಚಿತ್ರಗಳನ್ನು ಬಿಡಿಸಿ, ಬಣ್ಣ ತುಂಬಿರಿ. ಆನಂತರ ಅವುಗಳ ಬಗ್ಗೆ ಎರಡು ಮೂರು ವಾಕ್ಯಗಳನ್ನು ಬರೆಯಿರಿ.

– ಧ್ವನಿ ಬಳಗ

ವಿದ್ಯಾರ್ಥಿ/ವಿದ್ಯಾರ್ಥಿನಿಯ ಹೆಸರು: ..........................................................................

ಶಾಲೆಯ ಹೆಸರು:...................................................................................................

ದಿನಾಂಕ:.............................................................................................................

ಧ್ವನಿ ಶೈಕ್ಷಣಿಕ ಸಂಪನ್ಮೂಲ ಕೇಂದ್ರ
Dhwani Educational Resource Centre

೨೦೧೯–೨೦ ನವೆಂಬರ್–ಡಿಸೆಂಬರ್

ಪೂರಣ ಯೋಜನೆ
Poorana 2019-20 Project
is Supported by Many
Individual Donors